# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - TUESDAY 18-4-2023



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಮಲೇಶಿಯನ್ ಪಾಮೆಣ್ಣೆ 2 ತಿಂಗಳ ಗರಿಷ್ಠ ದೈನಿಕ ಗಳಿಕೆ

ಪೂರೈಕೆಯ ಕಳವಳ ಹಾಗೂ ದುರ್ಬಲ ರಿಂಗಿಟ್ಸ್ ಗಳಿಂದ ಮಲೇಶಿಯನ್ ಪಾಮೆಣ್ಣೆ ದರ ಫೆಬ್ರವರಿ 16 ನಂತರದ ಗರಿಷ್ಠ ದೈನಿಕ ಹೆಚ್ಚಳ, 3.3 ಶೇಕಡಾ, ಟನ್ ಗೆ 121 ರಿಂಗಿಟ್ಸ್ ಹೆಚ್ಚಳವಾಗಿ 3759 ರಿಂಗಿಟ್ಸ್ ( $ 847.39) ಗೇರಿದೆ. ಕಪ್ಪು ಸಮುದ್ರ ವಲಯದಲ್ಲಿ ಸಮುದ್ರ ಆಹಾರ ಧಾನ್ಯ ಕಾರಿಡಾರ್ ಮುಂದುವರಿಯುವಲ್ಲಿನ ಅನುಮಾನ, ಜಾಗತಿಕ ತೈಲದರಗಳೂ ಇತ್ಯಾದಿಗಳಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದೆ.

## 2022–23 ರಲ್ಲಿ ಭಾರತದ ಅಕ್ಕಿ ರಫ್ತು ದಾಖಲೆ 11 ಬಿಲಿಯನ್ ಡಾಲರ್ ದಾಟಿದ ಗಳಿಕೆ

2022–23 ನೇ ಸಾಲಿನಲ್ಲಿ ಭಾರತದ ಅಕ್ಕಿ ರಫ್ತು ದಾಖಲೆ 11 ಬಿಲಿಯನ್ ಡಾಲರ್ ಗೆ ಮೀರಿ, ಹಿಂದಿನ ವರ್ಷಕ್ಕಿಂತ 16 ಶೇಕಡಾ ಹೆಚ್ಚಳ ದಾಖಲಿಸಿದೆಯೆನ್ನಲಾಗಿದೆ. ರಫ್ತು ಗಾತ್ರ ಹಿಂದಿನ ವರ್ಷದ 21 ಮಿಲಿಯನ್ ಟನ್‌ಗಳಷ್ಟಾಗಿದೆಯೆನ್ನಲಾಗಿದೆ. ಪಶ್ಚಿಮ ಏಶಿಯಾ, ಆಫ್ರಿಕಾ ಹಾಗೂ ಯುರೋಪ್ ಟನ್ ಬಾಸ್ಮತಿಯೇತರ ಹಾಗೂ 4.9 ಮಿಲಿಯನ್ ಟನ್ ಬಾಸ್ಮತಿ ಹಾಗೂ ಸುಗಂಧಿಕ ಅಕ್ಕಿ ರಫ್ತು ಮಾಡಲಾಗಿದೆಯೆನ್ನಲಾಗಿದೆ.

## ಅಡಿಕೆ ದರ ಸ್ವಲ್ಪ ಚೇತರಿಕೆ

ಅಡಿಕೆ ಚಾಲಿ ಹಾಗೂ ಚೋಲ್ ದರ ಮಾರುಕಟ್ಟೆಯಲ್ಲಿ ಸ್ವಲ್ಪ ಮಟ್ಟಿನ ಚೇತರಿಕೆ ಕಂಡಿದೆ. ಹಿಂದಿನ 2,3 ವಾರಗಳಿಂದ ದರ ಉತ್ತಮಗೊಂಡಿದೆ. ಕೆಂಪಡಿಕೆ ದರವೂ ಏರಿಕೆಯಾಗಿದೆಯೆನ್ನಲಾಗಿದೆ.